ಹೇಗಿರುತ್ತಾನೆ, ಹೇಗೆ ಬಟ್ಟೆ ಧರಿಸುತ್ತಾನೆ ಅನ್ನುವುದರಿಂದ ಮಾತ್ರವೇ? ಯಾರೂ ಇಲ್ಲದಾಗ ಹಿನ್ನೆಲೆಯಲ್ಲಿ ಆತ ಪ್ರಕಟಿಸುವ ಬೇಜವಾಬ್ದಾರಿತನ, ಒರಟುತನಗಳೂ ಆತನ ವ್ಯಕ್ತಿತ್ವವೇ ಅಲ್ಲವೇ? ಈಗೆರಡು ವರ್ಷದಿಂದ ಬಿಬಿಎಂಪಿ ಆದೇಶ ಹೊರಡಿಸಿ ಹಸಿಕಸ, ಒಣಕಸ ಪ್ರತ್ಯೇಕಿಸಿ ಹಾಕಬೇಕು ಅಂತ ಹೇಳಿದಾಗಿಂದ ಈ ಹೊಸ ಕಾಟ ಸೇರಿಕೊಂಡಿತು. ಪ್ರೆಸಿಡೆಂಟ್ ಶಿವರಾಂ, ಸೆಕ್ರೆಟರಿ ಕನಕಾದೇವಿ, ಕೋಶಾಧಿಕಾರಿ ಜಯೇಂದ್ರ ರಾವ್ ಪ್ರತಿ ಅಂತಸ್ತಿನ ಪ್ರತಿಯೊಂದು ಫ್ಲ್ಯಾಟಿನ ಬಾಗಿಲಲ್ಲಿ ಈ ಒಂದು ವರ್ಷದಲ್ಲಿ ಹಲವು ಬಾರಿ ನಿಂತು ವಿವರಿಸಿ, ವಿನಂತಿಸಿ ಏನೇನೆಲ್ಲಾ ಮಾಡಿದ್ದರು. ಪ್ರತಿಯೊಬ್ಬರೂ ತಮಗೇನು ಅಷ್ಟು ತಿಳಿವಳಿಕೆಯಿಲ್ಲವೆ ಅನ್ನುವ ದನಿಯಲ್ಲಿ ಯಾವ್ಯಾವ ಕಸ ಎಲ್ಲೆಲ್ಲಿ ಹಾಕುತ್ತಿದ್ದೇವೆ ಅಂತ ವರದಿ ಕೊಟ್ಟು ಪ್ರಾಮಾಣಿಕತನ ಸ್ಥಾಪಿಸುತ್ತಿದ್ದರು. ಆದರೆ ಕಸದ ಡ್ರಮ್ಮಿನಲ್ಲಿ ಮಾತ್ರ ಹಸಿಯದರಲ್ಲಿ ಒಣಕಸ, ಒಣದರಲ್ಲಿ ಹಸಿಯದು ಸಿಕ್ಕಿ ಕಂಟ್ರಾಕ್ಟರಿಂದ ಮುಖಭಂಗ ತಪ್ಪುತ್ತಿರಲಿಲ್ಲ.

ಭಾನುವಾರ ಬೆಳಿಗ್ಗೆ ಹತ್ತು ಗಂಟೆಗೆ ತಳ ಅಂತಸ್ತಿನಲ್ಲಿ ಮೀಟಿಂಗಿದೆ, ಎಲ್ಲರೂ ತಪ್ಪದೆ ಬರಬೇಕು ಅಂತ ಮನೆಮನೆಗೂ ಸೂಚನೆ ಕಳಿಸಿತು ಕಮಿಟಿ. ವಾಟ್ಸ್ಆ್ಯಪಿನಲ್ಲೂ ಹಾಕಲಾಯಿತು. ಹನ್ನೆರಡರವರೆಗೆ ಕಾದರೂ ಬಂದದ್ದು ಹದಿನೈದು ಜನ. ರವಿವಾರ ಒಂದಿನ ಬಿಡುವು; ಸಾಮಾನು ತರೋದಿರುತ್ತೆ, ಬಟ್ಟೆ ತೊಳೆಯೋದಿರುತ್ತೆ ಅಂತ ಕೆಲವರು ಗೊಣಗಿದರೆ ಒಬ್ಬರು ಭಾನುವಾರ ಚರ್ಚಿಗೆ ತಪ್ಪಿಸಕ್ಕಾಗಲ್ಲ ಅಂದರು. ಇಬ್ಬರು ಹತ್ತಿರದವರ ಫಂಕ್ಷನ್ನಿದೆ ಹೋಗಲೇಬೇಕು, ನೀವೆಲ್ಲ ಏನು ನಿರ್ಣಯ ತಗೋತೀರೊ ಅದು ನಮಗೊಪ್ಪಿಗೆ ಅಂತ ಹೇಳಿ ಹೋದರು. ಕೆಲವರು ಮೊಬೈಲಿಗೂ ಸಿಗದೆ ನಾಪತ್ತೆಯಾದರು. ಅಪಾರ್ಟ್‌ಮೆಂಟಿನ ವಾಟ್ಸ್ಆ್ಯಪ್ ಗ್ರುಪ್ಪಿನಲ್ಲಿ ಇಲ್ಲಸಲ್ಲದ ಸಲಹೆ ಕೊಡುತ್ತ ಮಾರುದ್ದದ ಉಪದೇಶ, ಜೋಕು ಫಾರ್ವರ್ಡ್ ಮಾಡುತ್ತ ಲಭ್ಯವಿರುವ ಇವರು ಮುಖಾಮುಖಿಯಾಗಿ ಅಂದರೆ ಸ್ತಬ್ಧರಾಗುತ್ತಾರೆ. ಲಿಫ್ಟು, ನೀರಿನ ಪೋಲು, ಕಸ ವಿಂಗಡಣೆಯ ಸಮಸ್ಯೆ ಚರ್ಚೆಗೆ ಬಂತು. ಎರಡನೆ ನಂಬರು ಫ್ಲ್ಯಾಟುಗಳ ಸಾಲಿನ ಡಕ್ಟ್ ಪೈಪಿನಲ್ಲಿ ಇಪ್ಪತ್ನಾಲ್ಕು ತಾಸು ನೀರು ಹರಿಯೋ ಸದ್ದು ಬರುತ್ತೆ, ಯಾರದ್ದೋ ಮನೆ ಫ್ಲಶ್ ಟ್ಯಾಂಕು ಸೋರುತ್ತಿರಬೇಕು ಅಂದರು ಒಬ್ಬರು. ಆ ಪೈಕಿ ಹಾಜರಿದ್ದ ಒಬ್ಬರೆಒಬ್ಬರು '... ನಮ್ಮದಂತು ಅಲ್ಲ. ಈಗ ಬೇಕಿದ್ರು ಚೆಕ್ ಮಾಡಬಹುದು' ಅಂದರು. ಬೋರ್‌ವೆಲ್ಲಲ್ಲಿ ನೀರು ಕಮ್ಮಿಯಿದೆ, ಟ್ಯಾಂಕರ್ ತರಿಸ್ತಿದೀವಿ. ಲ್ಯಾಟ್ರಿನ್ನಿಗೆ ಹರಿಸೋದಕ್ಕೆ ಕಾರು ತೊಳೆಯೋದಕ್ಕೆ ಪೋಲಾದರೆ ಹೇಗೆ ಅಂದದ್ದಕ್ಕೆ ಅದು ತಾಗಿದ ಮೂರನೇ ಅಂತಸ್ತಿನ ಟೆಕ್ಕಿ, 'ನಿಮ್ಮ ಹಾಗೆ ಅಪರೂಪಕ್ಕಲ್ಲ, ದಿನಾ ಬೆಳಿಗ್ಗೆ ನಾನು ಕಾರು ತೆಗೀಬೇಕು. ಸ್ವಂತ ತೊಳೆಯೋಕೆ ಟೈಮೆಲ್ಲಿರುತ್ತೆ? ತೊಳೆಯೋಕಂತ ಬರೋವ್ನು ಒಂದೆರಡು ಬಕೆಟ್ ಉಪಯೋಗಿಸ್ತಾನೆ. ನಾನು ಬೆಳಿಗ್ಗೆ ಬಿಟ್ರೆ ರಾತ್ರೀನೆ ಮನೆ ಸೇರೋದು. ನೀರೆಲ್ಲಿ ಉಪಯೋಗಿಸ್ತೀನಿ ಹೇಳಿ' ಅಂತ ಅಸಹನೆ ತೋಡಿಕೊಂಡ. ಚರ್ಚೆ ಬಿಸಿಯೇರಿ ಎಲ್ಲೆಲ್ಲಿಗೋ ಹೋಯಿತು. ಕಸದ ಡ್ರಮ್ಮಿನ ಮೇಲೆ ಸಿಸಿ ಟೀವಿ ಕ್ಯಾಮರ ಹಾಕಿ ಅಂತ ಸಲಹೆ ಬಂತು. ಒಳ್ಳೆ ಪೊಲೀಸ್ ಇಲಾಖೆ ಅಪರಾಧಿಗಳನ್ನ ಪತ್ತೆಮಾಡೋ ತರಹ ಅನಿಸಿದರೂ ಅದೂ ಒಳ್ಳೆಯದೆ ಅನ್ನೋ ನಿರ್ಧಾರಕ್ಕೆ ಬಂದರು ಮರುದಿನ.

ಮೂಲೆಯಲ್ಲಿ 'ಹಸಿ', 'ಒಣ', 'ಸ್ಯಾನಿಟರಿ' ಅಂತ ಬರೆದ ಮೂರು ಡ್ರಮ್ಮುಗಳಿದ್ದುವು. ಮೇಲ್ಗಡೆ ಸಿಮೆಂಟ್ ಬೀಮುಗಳ ಎಜ್ಜೆಯಲ್ಲಿ ಆಟೊ ಕ್ಯಾಮರ ಸ್ಥಾಪನೆಯಾಯಿತು. ಸೋಮವಾರ ಮಧ್ಯಾಹ್ನವಾದ್ದರಿಂದ ಎರಡು ಮೂರು ಜನ ಬಿಟ್ಟು ಉಳಿದವರಿಗಿದು